

# ನೆಗೆಟಿವ್ ಪಾತ್ರ ಮಾಡಲಾರೆ

## ಸೂರಜ್ ಹೊಳಲು

### ಸ್ಟಾರ್ ಸುವರ್ಣದ 'ಶಾರದೆ'ಯ ಸಿದ್ಧಾರ್ಥ್

◆ **ಟೆಕ್ಕಿ ಕೆಲಸ ಬೋರ್ ಅನ್ನಿಸಲು ಕಾರಣ ಏನಿರಬಹುದು?**

ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಮಾಡಿದೆ. ಟೆಕ್ಕಿಯಾಗಿ ಎರಡ್ಮೂರು ತಿಂಗಳು ಕೆಲಸ ಕೂಡ ಮಾಡಿದೆ. ಓದುವಾಗಲೇ ನನಗೆ ತಾಂತ್ರಿಕ ಕೆಲಸ ಸೂಕ್ತ ಆಗುವುದಿಲ್ಲ ಎಂದೇ ನಿರ್ಧರಿಸಿದ್ದೆ. ಕೋಡಿಂಗ್ ಅಷ್ಟು ಇಷ್ಟ ಆಗುತ್ತಿರಲಿಲ್ಲ. ನನಗೆ ನಾಯಕನಾಗಿ ನಟಿಸಬೇಕು ಎನ್ನುವ ಆಸೆ ಮಾತ್ರ ಇತ್ತು. ಅದಕ್ಕಾಗಿ ಸಿದ್ಧತೆಯನ್ನೇನೂ ಮಾಡಿಕೊಂಡಿರಲಿಲ್ಲ. ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬಂದವನು ಕೆಲಸವನ್ನು ಪಡೆದೆ. ಆನಂತರ ವಾರಾಂತ್ಯದಲ್ಲಿ ನಟನೆಯ ತರಗತಿಗೆ ಸೇರಿದ್ದೆ. ಮೂರು–ನಾಲ್ಕು ತರಗತಿಗೆ ಹಾಜರಾಗಿದ್ದೆ ಎಂದೆನಿಸುತ್ತದೆ. ಅಷ್ಟರಲ್ಲಿ 'ಲಕ್ಷ್ಮೀ ಬಾರಮ್ಮ' ಸೀರಿಯಲ್ ಚಿತ್ರೀಕರಣದ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ನಿರ್ದೇಶಕ 'ಕುಲವಧು'ಗೆ ಆಡಿಷನ್ ಕೊಡಲು ತಿಳಿಸಿದರು. ಮೂರು ಬಾರಿ ಆಡಿಷನ್ ತೆಗೆದುಕೊಂಡು ಆಯ್ಕೆ ಮಾಡಿದರು. ಹಾಗಾಗಿ ನಟನಾಗಿ ನನ್ನ ವೃತ್ತಿ ಜೀವನ ಬದಲಾಯಿತು.

◆ **ಯಾವುದೇ ಒಂದು ಪಾತ್ರದ ಪ್ರಭಾವ ಮತ್ತು ಪರಿಣಾಮವನ್ನು ಹೇಗೆ ಗ್ರಹಿಸುತ್ತೀರಿ?**

ಆ ವಿಷಯದಲ್ಲಿ ನನಗೆ ಒಂದು ಸ್ಪಷ್ಟತೆ ಇದೆ. ಸೀರಿಯಲ್‌ನಲ್ಲಿ ನೆಗೆಟಿವ್ ಪಾತ್ರವನ್ನು ಯಾವುದೇ ಕಾರಣಕ್ಕೂ ಮಾಡಬಾರದು ಎಂದುಕೊಂಡಿದ್ದೇನೆ. ಒಂದೊಂದು ಧಾರಾವಾಹಿಗಳದ್ದೂ ದೀರ್ಘಕಾಲದ ಪ್ರಯಾಣ ಇರುತ್ತದೆ. ಹಾಗಾಗಿ ಅದರ ಪರಿಣಾಮ ನನ್ನ ಬೆಳವಣಿಗೆಗೆ ಅಡ್ಡಿಯಾಗಬಹುದು. ಇದರಿಂದ ಮುಗ್ಧ ವೀಕ್ಷಕರಲ್ಲಿ ನನ್ನ ಬಗ್ಗೆ ಕೆಟ್ಟ ವ್ಯಕ್ತಿತ್ವದ ಚಿತ್ರ ಸ್ಥಿರಗೊಳ್ಳುವ ಸಾಧ್ಯತೆಯೂ ಇದೆ. ಇದೇ ಕಾರಣಕ್ಕೆ ಅಂತಹ ಪಾತ್ರಗಳು ಬೇಡ ಎನ್ನುವುದು ನನ್ನ ಸದ್ಯದ ನಿಲುವು. ತೆಲುಗಿನಲ್ಲಿ ಸ್ವಲ್ಪ ನೆಗೆಟಿವ್ ಶೇಡ್ ಇರುವ ಪಾತ್ರ ಒಂದನ್ನು ಮಾಡಿದ್ದೆ. ಅಂತಹದ್ದಾದರೆ ತೊಂದರೆ ಇಲ್ಲ ಎಂದುಕೊಂಡಿದ್ದೇನೆ. ಪೂರ್ಣಪ್ರಮಾಣದ ನೆಗೆಟಿವ್ ಪಾತ್ರ ನನಗೆ ಒಗ್ಗುವುದಿಲ್ಲ. ಕೆಲವೊಂದು ಕಡೆ ಅತಿಥಿ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಈಗ ಸೀರಿಯಲ್‌ನಲ್ಲಿ ಪ್ರಮುಖ ಪಾತ್ರವನ್ನೇ ಮಾಡಬೇಕು ಎಂದುಕೊಂಡಿದ್ದೇನೆ.

◆ **'ಶಾರದೆ'ಯ ಸಿದ್ಧಾರ್ಥ್ ಪಾತ್ರ ನಿಮಗೆ ಹೇಗೆನಿಸುತ್ತದೆ?**

ನನ್ನ ವ್ಯಕ್ತಿತ್ವಕ್ಕೆ ಹೋಲಿಕೆ ಆಗುವ ಪಾತ್ರ ಅಲ್ಲ. ಒಂದು ಪಾತ್ರವಾಗಿ ತುಂಬ ಚೆನ್ನಾಗಿದೆ ಎಂದು ಅನ್ನಿಸಿದೆ. ಯಾವುದೇ ಪಾತ್ರದಲ್ಲೇ ಆದರೂ ಸಮಯ ಸಂದರ್ಭವನ್ನು ಹೇಗೆ ಎದುರಿಸಬೇಕು ಎನ್ನುವುದನ್ನು ವಿಚಾರ ಮಾಡಿ ಅದನ್ನೇ ಅನುಕರಿಸುತ್ತೇನೆ. ಸಿದ್ಧಾರ್ಥ್ ಪಾತ್ರದಲ್ಲಿಯೂ ಅದೇ ಪ್ರಯೋಗ ಮಾಡುತ್ತಿರುವೆ. ಇದರ ನಿರ್ವಹಣೆ ಕಷ್ಟ ಎಂದು ಎಲ್ಲೂ ಅನ್ನಿಸುವುದಿಲ್ಲ. ತಮಾಷೆಯ ಪಾತ್ರ ಆಗಿದ್ದರೂ ಕೆಲವೊಂದು ಕಡೆ ಗಂಭೀರ ಎಂದೆನಿಸುತ್ತದೆ. ಅದರಲ್ಲೂ ನಾಯಕಿಯ ಜೊತೆ ಹಾಗೆಯೇ ಇದೆ. ಈ ಪಾತ್ರದ ಹೆಸರೇ ನನಗೆ ತುಂಬ ಇಷ್ಟ.

◆ **ಮತ್ತೆ ನಿಮಗೆ ರಿಯಾಲಿಟಿ ಶೋ ಸ್ಪರ್ಧೆಗೆ ಆಹ್ವಾನ ಬಂದರೆ?**

ನನಗೆ ವೈಯಕ್ತಿಕವಾಗಿ ರಿಯಾಲಿಟಿ ಶೋಗಳು ಅಷ್ಟು ಇಷ್ಟ ಆಗಲ್ಲ. ಅದೇ ಕಾರಣಕ್ಕೆ ಬಂದ ಅವಕಾಶವನ್ನು ನಿರಾಕರಿಸುತ್ತೇನೆ. ಈ ಹಿಂದೆ 'ಡಾನ್ಸಿಂಗ್ ಚಾಂಪಿಯನ್' ಶೋ ಮಾಡಿದ್ದೆ. ಅದು ಡಾನ್ಸ್‌ಗೆ ಮಾತ್ರ ಸೀಮಿತ ಆಗಿರಲಿಲ್ಲ. ಅದರಾಚೆ ರಿಯಾಲಿಟಿ ಶೋಗಳು ಕಾರ್ಯಕ್ರಮಕ್ಕೆ ಕಂಟೆಂಟ್ ಬಯಸುತ್ತವೆ. ಅದು ನನಗೆ ಅಷ್ಟು ಇಷ್ಟ ಆಗಲ್ಲ. ಡಾನ್ಸ್ ಮತ್ತಷ್ಟು ಕಲಿಯಬಹುದು ಎನ್ನುವ ಏಕೈಕ ಕಾರಣಕ್ಕೆ ಅದನ್ನು ಮಾಡಿದ್ದೆ.

◆ **ನಿಮ್ಮ ಮೊದಲ ಸಿನಿಮಾ ಹೇಗಿರಬೇಕು ಎಂದು ಕನಸು ಕಟ್ಟಿಕೊಂಡಿದ್ದೀರಿ?**

ನನಗೆ ಇರುವುದೇ ಸಿನಿಮಾ ಕನಸು. ಇನ್ನೂ ಒಂದು ಸಿನಿಮಾ ಮಾಡಲು ಆಗಿಲ್ಲ. ಒಂದು ಸಿನಿಮಾ ಮಾಡಿದ್ದೆ, ಅದು ಬಿಡುಗಡೆ ಆಗಲಿಲ್ಲ. ಅದನ್ನು ಹೀಗೇ ಮಾಡಬೇಕು ಎಂದು ಯೋಚನೆಯನ್ನೂ ಮಾಡಿರಲಿಲ್ಲ. ತುಂಬ ದಿನಗಳಿಂದ ಸಿನಿಮಾಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಒಂದು ಹಂತದಲ್ಲಿ ಅದು ಸ್ಥಗಿತಗೊಳ್ಳುತ್ತಿದೆ. ಈಗ ಸೀರಿಯಲ್ ಜೊತೆ ನಟಿಸುತ್ತಲೇ ಸಿನಿಮಾ ಮಾಡಬೇಕು ಎಂದುಕೊಂಡಿದ್ದೇನೆ. ಒಳ್ಳೆಯ ಸಿನಿಮಾ ಮಾಡಬೇಕು ಎನ್ನುವುದು ನನ್ನ ಆಲೋಚನೆ. ಈಗ ಸಿನಿಮಾ ಕಥೆಯೊಂದು ಹೊಂದಿಕೆ ಆಗಿದೆ. ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ.

◆ **ನಿಮ್ಮ ಕ್ರಿಕೆಟ್ ಪ್ರೀತಿ ಬಗ್ಗೆ ಏನು ಹೇಳಬಯಸುತ್ತೀರಿ?**

ಕ್ರಿಕೆಟ್ ಮೇಲೆ ಆಸಕ್ತಿ ಇತ್ತು. ಅದನ್ನೇ ವೃತ್ತಿಯಾಗಿ ತೆಗೆದುಕೊಳ್ಳುವ ಮನಸ್ಸೂ ಇತ್ತು. ಹಾಸನದಲ್ಲಿ ಅಜ್ಜಿ ಮನೆಯಲ್ಲಿ ಇದ್ದು ಓದುತ್ತಿದ್ದೆ. ಅಲ್ಲಿ ಕ್ರಿಕೆಟ್ ಕ್ಲಬ್‌ಗಳು ಇರಲಿಲ್ಲ. ನನಗೆ ಆಟವನ್ನು ವೃದ್ಧಿಸಿಕೊಳ್ಳಲು ಅವಕಾಶ ಸಿಗಲಿಲ್ಲ. ಡಿಗ್ರಿ ಓದುವ ಹೊತ್ತಿಗೆ ಒಲ್ಲದ ಮನಸ್ಸಿನಿಂದ ಆ ಆಸೆಯನ್ನು ಬಿಟ್ಟೆ. ಕಿರುತೆರೆಗೆ ಬಂದ ನಂತರ ಮತ್ತೆ ಆಡುತ್ತಿದ್ದೇನೆ. ಅದು ಖುಷಿಯನ್ನೂ ಕೊಟ್ಟಿದೆ. ಈ ಸಲ ಶ್ರೀಲಂಕಾಕ್ಕೇ ಹೋಗಿದ್ದೆ. ನಮ್ಮ ತಂಡವೇ ರನ್ನರ್ ಅಪ್ ಆಯಿತು.

■ **ರಾಘವೇಂದ್ರ ಕೆ.**